ಶ್ರೀ ಆರ್. ವೆಂಕಟರಾಮಯ್ಯ.—ಖಾಸಗೀ ಸಂಸ್ಥೆಯಾಗಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಕಾನೂನಿನ ಒಂದೇ ಸ್ವಾಮಿ. ಆದಕ್ಕೋಸ್ಕರ ಅಲ್ಲಿ ಮಾನ್ಯ ಜಾಲಪ್ಪನವರು ಇಂಟರ್‌ಫಿಯರ್ ಆಗುವುದಾದರೆ ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಅವರು ಹೋಗಿ ಅಲ್ಲಿರುವ ವ್ಯವಹಾರಗಳನ್ನು ಬಗೆಹರಿಸಿ ಶಾಂತವಾತಾವರಣವನ್ನು ಮೂಡಿಸುವುದಕ್ಕೆ ಪ್ರಯತ್ನಿಸುತ್ತೀರಾ? ನಮಗೆ ಬೇಕಾಗಿರುವುದು ಇಷ್ಟು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಅದು ನನ್ನ ಕೆಲಸ ಅಲ್ಲ. ನನ್ನ ಕೆಲಸ ಎಂದರೆ ಅವ್ಯವಸ್ಥೆ ಆದಾಗ ಹತೋಟಿಗೆ ತರುವುದು. ರಾಜೀ ವ್ಯವಹಾರ ನನ್ನ ಕೆಲಸ ಅಲ್ಲ. ಸ್ಥಳೀಯ ಮಂತ್ರಿಯಿಂದರು ಇದ್ದಾರೆ, ಅವರು ಹೋಗಿ ಮಾಡಲಿ. ಅದು ನನ್ನ ಕೆಲಸ ಅಲ್ಲ,

ಶ್ರೀ ಬಿ. ಲಕ್ಕಪ್ಪ.—ಸಾಮಾನ್ಯ ಪ್ರಜೆಯ ಮಾನ ಪ್ರಾಣ ಹಾನಿ ಆಗುವಾಗ ರಕ್ಷಣೆ ಕೊಡ ಬೇಕಾದದ್ದು ಮಾನ್ಯ ಗೃಹಸಚಿವರ ಕರ್ತವ್ಯ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ರಕ್ಷಣೆ ಕೊಟ್ಟಿದ್ದೇವೆ. ಆದರೆ ಅದನ್ನು ದುರುಪಯೋಗ ಮಾಡಿಕೊಳ್ಳುವುದು ಬೇಡ ಅವರು ಬೀದಿಬೀದಿಯಲ್ಲಿ ಭಾಷಣ ಮಾಡಿ ತಿರುಗುತ್ತಿದ್ದರೆ ದಿನವೂ ನಾನು ಅವರ ಹಿಂದೆ ಓಡಾಡಲಿ ? ರಕ್ಷಣೆ ಕೊಡುತ್ತೇವೆ, ಇಲ್ಲಿಯವರೆಗೆ ರಕ್ಷಣೆ ಕೊಟ್ಟಿದ್ದೇವೆ. ಇನ್ನು ಮುಂದೆಯೂ ಕೊಡುತ್ತೇವೆ.

ಶ್ರೀ ಪಟವರ್ಧನ್.—ಸದನದ ಕೆಲವು ಸದಸ್ಯರು ಗಂಭೀರವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದಸ್ಯರ ಕಳಕಳಿ ಏನೆಂದರೆ, ಸಾಮಾಜಿಕ ಸ್ವತ್ತಾಗಿರತಕ್ಕಂಥ ಮಂಡಲ್ಲಿ ಅಲ್ಲಿಯ ವಾತಾವರಣದಲ್ಲಿ ಬಹಳಷ್ಟು ಕಟ್ಟು ಪರಿಣಾಮ ಉಂಟಾದರೆ ಶಾಲೆಗಳ ಮೇಲೆ, ಮಕ್ಕಳ ಮೇಲೂ ಕೂಡ ಅದರ ಪರಿಣಾಮ ಉಂಟಾಗುತ್ತದೆ ಸಾವಿರಾರು ಮಕ್ಕಳು ಓದತಕ್ಕ ಈ ಸಂಸ್ಥೆ ಬಗ್ಗೆ ಸರ್ಕಾರದವರು ಸ್ವಲ್ಪ ಜವಾಬ್ದಾರಿ ವಹಿಸಿ ಅಥವಾ ಬೇರೆಯವರ ಮುಖಾಂತರ ಇಬ್ಬರು ಸ್ವಾಮಿಗಳಲ್ಲಿ ರಾಜೀ ಮಾಡತಕ್ಕಂಥಾದ್ದು, ತನ್ಮೂಲಕ ಈ ಶಿಕ್ಷಣ ಸಂಸ್ಥೆ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗ ಬಹುದು. ಮಾನ್ಯ ಮುಖ್ಯಮಂತ್ರಿಗಳೂ ಒಂದು ಸಲಹೆಯಿದ್ದರು ಏನೆಂದರೆ ನಾನು ಕೂಡ ಈ ಬಗ್ಗೆ ಗಮನಹರಿಸುತ್ತೇನೆ ಎಂದು ಇದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಮಾನ್ಯಸಚಿವರು ಈ ಬಗ್ಗೆ ಸ್ವಲ್ಪ ಗಮನ ಹರಿಸಿ ಈ ಮಂಡಲದ ಬಗ್ಗೆ ಜವಾಬ್ದಾರಿ ವಹಿಸುವುದು ಒಳ್ಳೆಯದೆಂದು ಏಂಬುದು ನಮ್ಮೆಲ್ಲರ ಅಭಿಪ್ರಾಯ.

ಉಪಾಧ್ಯಕ್ಷರು.—ನಿಮ್ಮ ಸಲಹೆಯನ್ನು ಮಾನ್ಯ ಸಚಿವರು ಪರಿಶೀಲಿಸಲಿ,

೩) ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿರುವ ಹಳ್ಳಿಗಳಲ್ಲಿ ವ್ಯವಸಾಯಕ್ಕೆ ನೀರನ್ನು ಕೊಡದೆ, ನೀರಿನ ಕರ, ಹಾಗೂ ದಂಡವನ್ನು ವಸೂಲಿ ಮಾಡುತ್ತಿರುವ ಬಗ್ಗೆ,

ಶ್ರೀ ಶಿವಾನಂದ ಹಚ್. ಕೌಜಲಗಿ.— ಮಾನ್ಯ ಅಧ್ಯಕ್ಷರೇ, ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಹಳ್ಳಿಗಳಲ್ಲಿ ರೈತರಿಂದ ಅಧಿಕಾರಿಗಳು ಜಮೀನುಗಳಿಗೆ ನೀರನ್ನು ಕೊಡದೆ, ನೀರಿನ ಕರ ಮತ್ತು ದಂಡದ ಬಡ್ಡಿಯನ್ನು ಬಲಾತ್ಕಾರದಿಂದ ವಸೂಲು ಮಾಡಲಿಕ್ಕೆ ಹತ್ತಿರುವರು. ರೈತರು ತಾವು ಜಮೀನುಗಳಿಗೆ ನಿಜವಾಗಿಯೂ ಬಿತ್ತಿಕೊಂಡಿಲ್ಲ, ನೀರಿನ ಕರವನ್ನು ಸಹಾತ್ರ ಕೊಡುವುದಕ್ಕೆ ತಯಾರಿದ್ದರೂ ಕೂಡ ಅಧಿಕಾರಿಗಳು ದಂಡದ ಬಡ್ಡಿಯನ್ನು ಕೂಡಲೇ ಕೊಡಬೇಕೆಂದು ರೈತರಿಗೆ ವಿನಾಕಾರಣ ಬಲಾತ್ಕಾರ ಮಾಡಲಿಕ್ಕೆ ಹತ್ತಿರುತ್ತಾರೆ. ಇದರಿಂದ ಈ ಭಾಗದಲ್ಲಿ ಅಶಾಂತಿ ಆಗಲಿಕ್ಕೆ ಹತ್ತಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಜಿಲ್ಲೆಯ ರಾಯಬಾಗ್‌ಕ್ಕೆ ಭೇಟಿ ಕೊಟ್ಟಾಗ ನೀರಿನ ಕರ ಮತ್ತು ದಂಡದ ಬಡ್ಡಿಯನ್ನು ವಸೂಲು ಮಾಡಬಾರದು ಅದನ್ನು ಮನ್ನಾ ಮಾಡಬೇಕೆಂದು ರೈತರು ತಪ್ಪು ಕಳಕಳಿಯನ್ನು ವಿನಂತಿಸಿಕೊಂಡಾಗ ಮಾನ್ಯ ಮಂತ್ರಿಗಳು, ರೈತರಿಗೆ ಆಗುತ್ತಿರುವ ಅನ್ಯಾಯಗಳನ್ನು ಪ್ರತ್ಯಕ್ಷ ತಿಳಿದುಕೊಂಡು ಹಾಗೂ ಅಧಿಕಾರಿಗಳ ಸಂಗಡ ಸಮಾಲೋಚನೆ ನಡೆಸಿದ ನಂತರ ದಂಡದ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಮತ್ತು ಈ ಬಗ್ಗೆ ಕೂಡಲೇ ಸರ್ಕಾರದ ಆಜ್ಞೆ ಹೊಂಡಿಸುವುದಾಗಿಯೂ ಸಹ ಆಶ್ವಾಸನೆ ನೀಡಿದ್ದರು. ಆದರೆ ಇನ್ನೂ ಪರೆಗೆ ದಂಡದ ಬಡ್ಡಿ

ಯನ್ನು ಮನಾ ಮಾಡಿದ ಬಗ್ಗೆ ಸರ್ಕಾರದ ಆಜ್ಞೆ ಕೂಡಲೇ ಹೊರಡಿಸುವುದಾಗಬೇಕು. ಜಮೀನು ಗಳಿಗೆ ನಿಜವಾಗಿ ಮತ್ತು ನ್ಯಾಯವಾಗಿ ನೀರು ಒದಗಿಸಿ ಕೊಟ್ಟಷ್ಟು ನೀರಾವರಿ ಕರವನ್ನು ಮಾತ್ರ ರೈತರಿಂದ ವಸೂಲು ಮಾಡಬೇಕೆಂದು ಬೈಲಹೊಂಗಲ ಮತ್ತು ಸವದತ್ತಿ ತಹಶೀಲ್ದಾರರಿಗೆ ಕೂಡಲೇ ಆದೇಶ ನೀಡ ಬೇಕೆಂದು ನಾನು ಕಂದಾಯ ಮಂತ್ರಿಗಳ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).—

ಅಧ್ಯಕ್ಷರೇ, ೧-೧-೧೯೮೮ರಿಂದ ನೀರಕರ, ನೀರದಂಡ ಕರವನ್ನು ನೀರಾವರಿ ಇಲಾಖೆ ವಿಧಿಸು ತ್ತದೆ. ಹಾಗೂ ಈ ಇಲಾಖೆಯು ವಿಧಿಸಿದ ಡಿಮಾಂಡ್ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಕಂದಾಯ ಇಲಾಖೆಯ ಅಧಿಕಾರಿಗಳು ಕರ್ನಾಟಕ ಭೂ ಕಂದಾಯ ನಿಯಮಗಳ ೧೪ನೇ ಪರಿಚ್ಛೇದದಲ್ಲಿ ವಿವರಿಸಿರುವ ಕ್ರಮಗಳನ್ನು ಪಾಲನೆ ಮಾಡಿ ವಸೂಲಿಯನ್ನು ಮಾಡುತ್ತಾರೆ. ಈ ಡಿಮಾಂಡ್ ಪಟ್ಟಿಗಳು ಸಕಾಲಕ್ಕೆ ಕಂದಾಯ ಇಲಾಖೆಗೆ ಬರುತ್ತಿಲ್ಲ ಹಾಗೂ ಅವುಗಳು ದೋಷಪೂರಿತವಾಗಿರುತ್ತವೆಯಾಗಿ ವಸೂಲಿಗೆ ಅಡಚಣೆಯಾಗಿದ್ದು, ಬಹಳಷ್ಟು ಹೊತ್ತ ಅನೇಕ ವರ್ಷಗಳಿಂದ ಬಾಕಿಯಾಗಿಯೇ ಉಳಿದಿದೆ. ಇದಲ್ಲದೆ, ಎಲ್ಲೆಲ್ಲಿ ರೈತರು ತಮ್ಮ ಜಮೀನಿಗೆ ನೀರು ಪೂರೈಕೆಯಾಗಿಲ್ಲವೆಂದು ತಕರಾರು ಇದೆಯೋ ಅಂತಹವರು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಶನರ್‌ರವರ ಮುಂದೆ, ಅಪೀಲನ್ನು (ಮೇಲ್ಮನವಿ) ಸಲ್ಲಿಸಲು, ನೀರಾವರಿ ಕಾಯ್ದೆಯಡಿಯಲ್ಲಿ ಅವಕಾಶವಿದೆ. ಈ ಸೌಲಭ್ಯವನ್ನು ಈ ರೈತರು ಉಪಯೋಗಿಸಿಕೊಳ್ಳಬಹುದಾಗಿದೆ. ಇದನ್ನು ಬಗೆಹರಿಸುವ ದೃಷ್ಟಿಯಿಂದ ನೀರಾವರಿ ಇಲಾಖೆಯು ಕರ್ನಾಟಕ ನೀರಾವರಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಆವಶ್ಯಕತೆಯನ್ನು ಆ ಇಲಾಖೆಗೆ ಸ್ಪಷ್ಟಪಡಿಸಿದ್ದು, ಇದಕ್ಕಾಗಿ ಈ ತಿದ್ದುಪಡಿಯನ್ನು ಸಲಹೆ ಮಾಡಲಾಗಿದೆ.

ಅ) ಡಿಸೆಂಬರ್ ೩೧ಕ್ಕೆ ಕಾರಿಫ್ ಬೆಳೆಗೂ ಮಾರ್ಚ್ ೩೧ ಕ್ಕೆ ರಾಬಿ ಬೆಳೆಗೂ ಮತ್ತು ಜೂನ್ ೩೦ಕ್ಕೆ ಸಮ್ಮರ್ ಬೆಳೆಗೂ ಡಿಮಾಂಡ್ ಪಟ್ಟಿಯನ್ನು ತಹಶೀಲ್ದಾರರಿಗೆ ಮುಟ್ಟಿಸುವುದು.

ಆ) ರೀ ಬುಕ್ಕಿಂಗ್ ಮಾಡಿದುದರ ಪರಿಣಾಮವಾಗಿ ಹೆಚ್ಚಾಗಿ ಪಾವತಿ ಮಾಡಿರುವ ನೀರಕರ, ನೀರದಂಡ ಕರ ಹೆಣವನ್ನು ಮುಂದಿನ ಸಾಲುಗಳಲ್ಲಿ ತರಬೇಕಾಗಿರುವ ಪೊತ್ತಕ್ಕೆ ಜಮಾ ಮಾಡಿಕೊಳ್ಳುವುದು.

ವಸೂಲಿ ಕಾರಿತಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದಂತೆಹಾಗೂ ೨೧-೧೧-೧೯೮೭ರಂತ್ತು ೮-೧೨-೮೭ರ ಸಚಿವ ಸಂಪುಟ ತೀರ್ಮಾನದಂತೆ ಕಂದಾಯ ಇಲಾಖೆಯು ೧-೭-೮೮ರಲ್ಲಿ ವಸೂಲಾಗದೆ ಬಾಕಿ ಉಳಿದಿರುವ ಎಲ್ಲಾ ಸರ್ಕಾರಿ ಬಾಕಿಗಳ ಶೇ. ೫೦ ರಷ್ಟನ್ನು ಈ ಸಾಲಿನ ವಿವಿಧ ಸರ್ಕಾರಿ ಬಾಕಿಗಳ ಪೂರ್ಣ ಪೊತ್ತದೊಂದಿಗೆ ೩೧-೩-೮೮ರ ವೇಳೆಗೆ ವಸೂಲಿ ಮಾಡಲೇಬೇಕೆಂಬ ನಿರ್ಣಯದ ಹಿನ್ನೆಲೆಯಲ್ಲಿ ಎಲ್ಲಾ ವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳು ಇವರನ್ನು ತಮ್ಮ ವಿಭಾಗದ ಜಿಲ್ಲೆಯಂ ವಸೂಲಿ ಗುರಿ ಯನ್ನು ನಿಗಧಿಪಡಿಸಿಕೊಂಡು ಒಂದು ವಿಶೇಷ ವಸೂಲಿ ಕಾರ್ಯಕ್ರಮವನ್ನು ರೂಪಿಸಿಕೊಂಡು ಈ ಗುರಿ ಯನುಸಾರ ವಸೂಲಿಯನ್ನು ನಡೆಸುವಂತೆ ಆದೇಶವನ್ನು ಹೊರಡಿಸಿದೆ. ಈ ನಿಗದಿತ ವಸೂಲಿ ಗುರಿ ಯನ್ನು ಮುಟ್ಟುವ ಉದ್ದೇಶದಿಂದ ನಿಖರವಾಗಿ ನೀರಕರ, ನೀರದಂಡ ಕರ ಹಾಗೂ ಇನ್ನೂ ಇತರೆ ಕರಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳು ವಸೂಲಿ ಮಾಡುವುದು ಅನಿವಾರ್ಯವಿದೆ. ಹಾಗೂ ಈ ವಸೂಲಿ ಕ್ರಮಬದ್ಧವಾಗಿದೆ. ವಸೂಲಿಯಲ್ಲಿನ ಪ್ರಗತಿಯನ್ನು ಸರ್ಕಾರವು ತೀವ್ರವಾಗಿ ಆಗಿಂದಾಗ್ಗೆ ಪರಾಮರ್ಶಿಸುತ್ತದೆ.

ರೈತ ಸಂಘದ ಪ್ರತಿನಿಧಿಗಳೊಂದಿಗೆ ೨೫-೭-೧೯೮೫ರಂದು ಚರ್ಚೆ ಆದಮೇಲೆ ಸರ್ಕಾರವು ೧೯೭೬ ರಕ್ಕಿದ್ದ ನೀರು ಕರ ವಸೂಲಿ ಬಗ್ಗೆ ನಿರ್ಣಯ ಮಾಡಿ ಆಜ್ಞೆಯ ಬಗ್ಗೆ ಪುನಹ ಪರಿಶೀಲನೆ ಮಾಡಿ ನೀರಿನ ಕರ ವಸೂಲಿ ಬಗ್ಗೆ ಕ್ರಮ ತೆಗೆದುಕೊಂಡಿರುತ್ತೇವೆ.

ಮಲಪ್ರಭಾ ಭಾಗದ ರೈತರ ಮುಖಂಡರೊಂದಿಗೆ ಮತ್ತು ಸರ್ಕಾರದೊಂದಿಗೆ ಚರ್ಚೆ ಆದ ಮೇಲೆ ಯಾವ ಜಮೀನಿಗೆ ನೀರು ಕೊಟ್ಟಿರುತ್ತದೋ ಅಂತಹ ರೈತರಿಂದ ಮಾತ್ರ ನೀರು ಕರ ವಸೂಲಿ ಮಾಡು ವಂತ ಅಧಿಕಾರಿಗಳಿಗೆ ತಿಳಿಸಿ ಎಲ್ಲೆಲ್ಲಿ ನೀರು ಒದಗಿಸಿಲ್ಲವೋ ಅಂತಹ ಜಮೀನುಗಳಿಗೆ ನೀರಂ ಕರ ವಸೂಲಿ ಮಾಡದಂತೆ ಆದೇಶ ನೀಡಲಾಗಿದೆ.

ಇತ್ತೀಚೆಗೆ ನಾನು ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಿಗೆ ಬೇಟಿ ಕೊಟ್ಟಾಗ ಅಲ್ಲಿನ ರೈತ ಪ್ರತಿನಿಧಿಗಳೊಡನೆ ಚರ್ಚೆ ಮಾಡಿ ಕಂದಾಯ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು ರೈತ ಪ್ರತಿನಿಧಿಗಳೊಂದಿಗೆ ಜಮೀನಿನ ಸರ್ವೆ ಮಾಡಿ ನೀರು ಕೊಟ್ಟಂತಹ ಜಮೀನಿನ ಮಾಲೀಕರಿಂದ ಮಾತ್ರ ನೀರು ಕರ ವಸೂಲಿ ಮಾಡುವಂತೆ ಆದೇಶ ನೀಡಿದೆ.

ಈ ಸರ್ವೆ ಬಹು ಭಾಗಗಳಲ್ಲಿ ಆಗಿ ರೈತರು ಈಗಾಗಲೇ ಆವರು ಕೊಡಬೇಕಾದ ನೀರಿನ ದರದ ಬಾಕಿಯಲ್ಲಿ ಭಾಗಶಃ ಹಣವನ್ನು ಪಾವತಿ ಮಾಡಿರುತ್ತಾರೆ ರೈತರಿಂದ ದಂಡ ನೀರು ತೆರಿಗೆ ಸಂಪೂರ್ಣವಾಗಿ ವಸೂಲಿ ಮಾಡಬೇಕೆಂಬ ಬೇಡಿಕೆ ಇದ್ದು. ಈ ಬೇಡಿಕೆ ಸರ್ಕಾರದ ಪರಿಶೀಲನೆಯಲ್ಲಿದೆ,

ಶ್ರೀ ಎಸ್.ಪೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈ ನೀರಿನ ದಂಡದ ಬಡ್ಡಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಜಿಲ್ಲೆಗೆ ಬಂದಾಗ ಸೂಟ್ ಬಿಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಈ ಬಗ್ಗೆ ಆರ್ಡರ್ ಆಗಿಲ್ಲ. ಅಲ್ಲಿ ಯಾರೂ ನೀರಿನ ಕರವನ್ನೇ ಕೊಡುವುದಕ್ಕೆ ತಯಾರಿಲ್ಲ. ನೀರಿನ ಬಡ್ಡಿಗೆ ಸಾವಿರ ಇದ್ದರೆ, ದಂಡದ ಬಡ್ಡಿಗೆ ಸಾವಿರ ಇರುತ್ತದೆ. ಒಂದು ಎಕರೆಗೆ ಸುಮಾರು ೨೭ ಸಾವಿರ ನೀರು ದರ ಮತ್ತು ದಂಡದ ಬಡ್ಡಿ ಕೊಡಬೇಕೆಂದು ಅಲ್ಲಿನ ತಹಶೀಲ್ದಾರರು ತಿಳಿಸುತ್ತಾರೆ. ಇದನ್ನು ಕೊಡದೇ ಹೋದರೆ, ಜಪ್ತಿ ಮಾಡುವುದಕ್ಕೆ ಬರುತ್ತಾರೆ. ಈ ದಂಡದ ಬಡ್ಡಿಯನ್ನು ಸೂಟ್ ಬಿಡುತ್ತೇವೆಂದು ಹೇಳಿದರು. ಆದುದರಿಂದ, ಈಗಾಗಲೇ ರೈತರಿಗೆ ಕೊಟ್ಟಿರುವ ವಚನದ ಪ್ರಕಾರ, ಕೂಡಲೇ ಆರ್ಡರ್ ಮಾಡಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ, ಈ ದಂಡದ ಬಡ್ಡಿ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ದಂಡದ ಬಡ್ಡಿ ವಸೂಲ್ಮಾಡಬಾರದು. ಎಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ನೀರಿನ ದರವನ್ನು ಕೊಡಲಿ. ಈ ದಂಡದ ಬಡ್ಡಿ ಸಂಪೂರ್ಣವಾಗಿ ಬಿಡಬೇಕೆಂದು ಬೇಡಿಕೆ ಇದೆ, ಇದು ಹತ್ತಾರು ವರ್ಷಗಳಿಂದ ಬಂದಿರತಕ್ಕಂಥದ್ದಾಗಿದೆ ಸರ್ಕಾರ ಸಹಾನುಭೂತಿಯಿಂದ ಇದನ್ನು ಪರಿಶೀಲನೆ ಮಾಡುತ್ತಿದೆ. ದಂಡದ ಬಡ್ಡಿ ವಸೂಲಿಯನ್ನು ಈಗ ನಿಲ್ಲಿಸಿದ್ದೇವೆ. ಮೂಲ ನೀರಿನ ಕರ ಮಾತ್ರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ನೀರಿನ ಕರ ಕಟ್ಟಿದರೆ ದಂಡದ ಬಡ್ಡಿ ವಸೂಲು ಮಾಡುವುದಿಲ್ಲ ಎಂದು ಹೇಳಿದ್ದಾರೆ,

೪ ರಾಜ್ಯದಲ್ಲಿ ಅಂಗೀಕೃತ ವೈದ್ಯಕೀಯ ಕಾಲೇಜುಗಳಲ್ಲಿ ಮೈಗ್ರೇಷನ್ ಆದಾಗ ಎಂ.ಸಿ.ಐ, ನಿಯಮಗಳನ್ನು ಪಾಲಿಸದಿರುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಅಂಗೀಕೃತ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೈಗ್ರೇಷನ್ ಆದಾಗ ಎಂ.ಸಿ.ಐ. ನಿಯಮಗಳನ್ನು ಪಾಲಿಸದಿರುವುದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆ. ಡಿ.ಜಿ. ಬಸವನಗೌಡ ಮಂತಾದವರು ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲು ಬಯಸುತ್ತೇನೆ.

ಒಂದು ವೈದ್ಯಕೀಯ/ದಂತ ವಿದ್ಯಾಲಯದಿಂದ ಬೇರೆ ವೈದ್ಯಕೀಯ/ದಂತ ವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ವರ್ಗಾವಣೆ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಸರ್ಕಾರವು ಹೊರಡಿಸಿದೆ.

೧ ವಿದ್ಯಾರ್ಥಿಗಳ ಸ್ಥಾನಾಂತರ ವರ್ಗಾವಣೆಗೆ ಸಂಬಂಧಿಸಿದಂತೆ ಇರುವ ಎಲ್ಲಾ ವಿಷಯಗಳನ್ನು ಮುಂದೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ವ್ಯವಹರಿಸಬೇಕು.

೨ ಭಾರತೀಯ ವೈದ್ಯ ಪರಿಷತ್ತಿನ ಸೂತ್ರ ಪ್ರಕಾರ ಮತ್ತು ಕೆಳಕಂಡ ಪರಿಷತ್ತಿನಡಿಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ವರ್ಗಾವಣೆ ಅನುಮೋದಿಸಲು ಅಥವಾ ತಿರಸ್ಕರಿಸಲು ಅಧಿಕಾರ ಉಳ್ಳವರಾಗಿರುತ್ತಾರೆ.

೧. ವೈದ್ಯಕೀಯ ಶಿಕ್ಷಣ ನಿರ್ದೇಶಕರೇ, ವರ್ಗಾವಣೆ ಪ್ರಕರಣಗಳನ್ನು ಸರ್ಕಾರಕ್ಕೆ ಉಲ್ಲೇಖಿಸದೇ ಕಟ್ಟುನಿಟ್ಟಾಗಿ ನಿಯಮಾವಳಿಯಂತೆ ತೀರ್ಮಾನಿಸತಕ್ಕದ್ದು.